**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

(ದಿಃ 18.06.2024 ರ ಆದೇಶದಂತೆ)

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 04.07.2024

ಮು. ಪಾಟಿ ಸವಾಲು ಃ 1 ನೇ ಪ್ರತಿವಾದಿ ಪರ ವಕೀಲರಿಂದ

ನನ್ನ ತಂದೆಗೆ ನಾವು ಇಬ್ಬರು ಮಕ್ಕಳು ಇರುತ್ತೇವೆ. ನನ್ನ ತಮ್ಮನ ಹೆಸರು ಜೆ.ಸಿದ್ದೇಗೌಡ ಇರುತ್ತದೆ. ನನ್ನ ತಮ್ಮನಾದ ಸಿದ್ದೇಗೌಡ ರವರು ಪ್ರಸ್ತುತ ತೀರಿಕೊಂಡಿರುತ್ತಾರೆ. ಸದರಿ ಸಿದ್ದೇಗೌಡರವರ ಹೆಂಡತಿ ಹೆಸರು ಮಲ್ಲಮ್ಮ ಇರುತ್ತದೆ. ನನ್ನ ಚಿಕ್ಕಪ್ಪನಾದ ಕೋಲಕಾರ್ ಜವರಯ್ಯರವರಿಗೆ 6 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನಲ್ಲಿ ಸ.ನಂ.621/4 ರಲ್ಲಿ 23 ಗುಂಟೆ ಎಂದು ತಿಳಿಸಿದ್ದು ಸದರಿ 23 ಗುಂಟೆ ಜಮೀನಿನಲ್ಲಿ ನಿಮ್ಮ ಕುಟುಂಬದ ನಡುವೆ ಭಾಗ ಆಗಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ನನ್ನ ಚಿಕ್ಕಪ್ಪನಿಗೆ ಭಾಗ ನೀಡಿರುವುದಿಲ್ಲ.

ಕೋಲಕಾರ್ ಜವರಯ್ಯ ರವರ ಮಗಳು ಶಿವಮ್ಮ ಎಂದು ಇರುತ್ತಾರೆ ಎಂದರೆ ಸರಿ. ಶಿವಮ್ಮ ರವರು ಗಂಡನ ಹೆಸರು ನಾಗರಾಜು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಶಿವಮ್ಮ ರವರ ಹೆಸರಿನಲ್ಲಿ ಸ್ವತ್ತಿನ ಸಂಃ 80 ರಲ್ಲಿ ಪೂರ್ವ-ಪಶ್ಚಿಮ- 88 ಅಡಿ ಹಾಗೂ ಉತ್ತರ-ದಕ್ಷಿಣ- 35 ಅಡಿ ವಿಸ್ತೀರ್ಣದ ನಿವೇಶನವು ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸ್ವತ್ತಿನ ಸಂಃ 84 ರಲ್ಲಿನ ನಿವೇಶನವು ಮೊದಲಿಗೆ ಸಿದ್ದೇಗೌಡರ ಹೆಸರಿನಲ್ಲಿದ್ದು ನಂತರ ಅವರ ಹೆಂಡತಿಯಾದ ಮಲ್ಲಮ್ಮ ರವರ ಹೆಸರಿಗೆ ವರ್ಗಾವಣೆಯಾಗಿದ್ದು ನಂತರ ನಾಗರಾಜು ರವರಿಗೆ ಮಲ್ಲಮ್ಮ ರವರು ದಿಃ 30.12.1996 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದುಎಂದು ನುಡಿಯುತ್ತಾರೆ. ಸಾಕ್ಷಿಗೆ ದಿಃ 30.12.1996 ರ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿರುವ ವಿಚಾರಗಳನ್ನು ಓದಿ ಹೇಳಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು 1 ನೇ ಪ್ರತಿವಾದಿ ಪರವಾಗಿ ನಿಡಿ.12 ಎಂದು ಗುರುತಿಸಲಾಯಿತು. ಸದರಿ ಕ್ರಯ ಪತ್ರವು ಸ.ನಂ.626/4 ಕ್ಕೆ ಸಂಬಂಧಿಸಿದ್ದು ಇರುತ್ತದೆ ಎಂದರೆ ಸರಿ. ಅದೇ ರೀತಿ ಶಿವಮ್ಮ ರವರ ಹೆಸರಿನಲ್ಲಿರುವ ಸ್ವತ್ತಿನ ಸಂಃ 80 ಸಹ ಸ.ನಂ.626/4 ಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.